

# ಮುತ್ತಾಬಳವನ ಹಕ್ಕಿ ಕತೆ

ಚಿತ್ರ: ಶಶಿಧರ ಹಳೇಮನಿ

ಒಂದು ಊರಾಗೆ ಗಂಡಾ ಹೆಣ್ತೆ ಮುತ್ತಬಳವಾ ಹಕ್ಕಿ ಇದ್ದವು. ಅವು ಚಂದಗೆ ಗೂಡು ಕಟ್ಟಿಕೊಂಡಿದ್ದವು. ಹೆಣ್ಣು ಹಕ್ಕಿ ಎರಡು ಮೊಟ್ಟೆಯನ್ನು ಹಾಕಿಕೊಂಡು ದಿವಸಾ ಅದರ ಸುತ್ತಲೂ ಓಡಾಡ್ತಾ ಕಾವು ಕೊಡ್ತಾ ಇದ್ರೆ, ಗಂಡು ಹಕ್ಕಿ ದೂರದೂರ ಹೋಗಿ ಅಕ್ಕಿ ಆರಿಸಿಕೊಂಡು ಕಾವನ್ನು ಕೊಡುತ್ತಾ ಕುಂತಿದ್ದ ಹೆಣ್ಣು ಹಕ್ಕಿಗೆ ತಿನಿಸುತ್ತಿತ್ತು.

ಒಂದು ದಿನ ಗೂಡಿನ ಎದುರಿಗಿದ್ದ ಮನೆಯ ಶಾಲೆಗೆ ಹೋಗುವ ಚಿಕ್ಕ ಹುಡುಗ ತತ್ತಿಗಳನ್ನು ಕೆಳಕ್ಕೆ ಬೀಳಿಸಿಬಿಟ್ಟಾ. ಆ ತತ್ತಿಯು ಪರಗಿಹಣ್ಣಿನ ಮುಳ್ಳುಕಂಟಿಯಲ್ಲಿ ಬಿದ್ದು ಬಿಟ್ಟವು. ಹೆಣ್ಣು ಮುತ್ತಬಳವಾ ಚೀರಿ ಚೀರಿ ಅದನ್ನು ಆರಿಸಿಕೊಳ್ಳಲು ನೋಡಿತು. ತುಂಬಾ ಮುಳ್ಳು ಇದ್ದುದರಿಂದ ಪೊದೆಯೊಳಗೆ ಹೋಗಲಿಕ್ಕೆ ಅದಕ್ಕೆ ಆಗಲೇ ಇಲ್ಲ. ಅವುಗಳಿಗೆ ತುಂಬಾ ದುಃಖ ಆಗಿಬಿಡ್ತು. ಅದೆ ಹೊತ್ತಲ್ಲಿ ಅಲ್ಲಿ ಓಡಾಡ್ತಿದ್ದ ಇಲಿಯೊಂದು 'ಯಾಕೆ ಮುತ್ತಬಳವಾ, ಅಳ್ತಾ ಇದೀಯಾ?' ಎಂದು ಕೇಳಿತು. ಅದಕ್ಕೆ ಹೆಣ್ಣು ಹಕ್ಕಿಯು 'ನನ್ನ ಮೊಟ್ಟೆಯನ್ನು ಗೂಡಿಂದ ಆ ಹುಡುಗ ಕೆಳಗೆ ಕೆಡವಿಬಿಟ್ಟಿದ್ದಾನೆ. ನೀನು ಒಂಚೂರು ಹುಡುಗನಿಗೆ ಕಚ್ಚಿ ಹೆದರಿಸು. ಅವನು ಆ ಮೊಟ್ಟೆಗಳನ್ನು ತೆಗೆದುಕೊಡುತ್ತಾನೆ' ಎಂದು ಹೇಳಿತು. ಆಗ ಇಲಿಯು 'ನನ್ನ ಕೈಯಲ್ಲಿ ಆಗಲ್ಲಪಾ, ನಂಗೆ ಕೆಲಸ ಇದೆ' ಎಂದು ಹೊರಟುಬಿಡ್ತು. ಆಗ ನಿರಾಶನಾದ ಮುತ್ತಬಳವಾ ಅಳುತ್ತಾ ಕುಳಿತುಕೊಂಡಿತು.

ಅಷ್ಟೊತ್ತಿಗೆ ಅಲ್ಲೊಂದು ಬೆಕ್ಕು ಜಿಗಿದಾಡುತ್ತಾ ಬರುತ್ತಿತ್ತು. ಅದು ಅಳುತ್ತಾ ಇರುವ ಮುತ್ತಾಬಳವಾನಾ 'ಯಾಕಳ್ತಿಯಾ' ಅಂತಾ ಕೇಳ್ತು. ಅದು ಮೊದಲಿನಂತೆ ಹೇಳಿತು. 'ಆ ಹುಡುಗ ಮೊಟ್ಟೆಯನ್ನು ಕೆಡವಿದ್ದಾನೆ, ತೆಗೆದುಕೊಡು ಎಂದರೆ ಕೊಡುತ್ತಿಲ್ಲ. ಇಲಿಗೆ ಹೋಗಿ ಅವನಿಗೆ ಕಚ್ಚು ಅಂದ್ರೆ ಅದು ಆಗುವುದಿಲ್ಲ ಎನ್ನುತ್ತದೆ. ಅದಕ್ಕೆ ನೀನು ಹೋಗಿ ಇಲಿಯ ಬಾಲ ಕಚ್ಚು, ಅದು ಹೋಗಿ ಹುಡುಗನಿಗೆ ಕಚ್ಚುತ್ತದೆ. ಅವನು ಮೊಟ್ಟೆಗಳನ್ನು ತೆಗೆದುಕೊಡುತ್ತಾನೆ' ಎಂದಿತು. ಆಗ ಬೆಕ್ಕು 'ಇಲ್ಲಪಾ ನನಗೆ ಕೆಲಸ ಇದೆ, ನನಗೆ ಆಗಲ್ಲ' ಎಂದು ಮನೆ ಕಡೆ ಹೊರಟಿತು.

ಆಗ ಅಳುತ್ತಾ ಹಕ್ಕಲಿನಲ್ಲಿ ಓಡಾಡುತ್ತಿದ್ದ ನಾಯಿನೂ ಕೇಳುತ್ತದೆ. ಅದಕ್ಕೆ 'ನೀನು ಹೋಗಿ ಬೆಕ್ಕಿನ ಕಿವಿಯನ್ನು ಕಚ್ಚು, ಅದು ಹೋಗಿ ಇಲಿಯ ಬಾಲವನ್ನು ಕಚ್ಚುತ್ತದೆ. ಇಲಿ ಹೋಗಿ ಅವನಿಗೆ ಕಚ್ಚುತ್ತದೆ. ಅವನು ಮೊಟ್ಟೆಯನ್ನು ತೆಗೆದುಕೊಡುತ್ತಾನೆ' ಎಂದು ಹಕ್ಕಿಯು ನಾಯಿಯನ್ನು ಬೇಡಿಕೊಂಡಿತು. ಆಗ ಆ ನಾಯಿಯು 'ಇಲ್ಲಪಾ ನಂಗೆ ಬಹಳ ಕೆಲಸ ಇದೆ' ಅಂತಾ ಬಾಲವನ್ನು ತಿರುಗಿಸಿಕೊಂಡು ಮನೆ ಕಡೆ ಹೊರಟಿತು.

ಆಗ ಮುತ್ತಾಬಳವಾ ಅಳುತ್ತಾ ಮುಂದೆ ಹೊರಟಿತು. ಅಲ್ಲೊಂದು ಮನೆ ಎದುರಿಗೆ ಮುದಕನೊಬ್ಬನು ಬೆಂಕಿ ಕಾಯಿಸ್ತಾ ಕುಂತಿದ್ದ. ಅವನು ಹಕ್ಕಿಯನ್ನು ನೋಡಿ 'ಯಾಕೆ ಅಳ್ತಾ ಇದೀಯಾ ಮುತ್ತಬಳವಕ್ಕಾ' ಅಂದ. ಅದಕ್ಕೆ ಮುತ್ತಾಬಳವಾ ಅಳುತ್ತಾ 'ಆ ಹುಡುಗ ನನ್ನ ಮೊಟ್ಟೆಗಳನ್ನು ಕೆಡಗಿದ್ದಾನೆ. ಅದನ್ನು ತೆಗೆದುಕೊಡು ಅಂದ್ರೆ ಕೊಡ್ತಿಲ್ಲ. ಇಲಿಗೆ ಹೇಳಿದೆ ಆ ಹುಡುಗನನ್ನು ಕಚ್ಚಿ ಹೆದರಿಸು ಅಂತಾ, ಇಲಿ ಆಗಲ್ಲ ಅಂದಿತು, ಬೆಕ್ಕಿಗೆ ಹೋಗಿ ಆ ಇಲಿಗೆ ಕಚ್ಚು, ಆ ಇಲಿ ಹೋಗಿ ಅವನಿಗೆ ಕಚ್ಚುತ್ತದೆ ಅವನು ತಕ್ಕೊಡ್ತಾನೆ ಅಂದ್ರೆ ಅದೂ ಆಗಲ್ಲ ಅಂತಿದೆ. ನಾಯಿಗೆ ಹೇಳಿದೆ ಆ ಬೆಕ್ಕನ್ನು ಕಚ್ಚು ಅಂತಾ ಅದೂ ಕೂಡಾ ಆಗಲ್ಲ ಎಂದಿತು. ನೀ ಹೋಗಿ ನಾಯಿಗೆ ದೊಣ್ಣೆ ತಗೊಂಡು ಹೊಡಿ. ಅದು ಹೋಗಿ ಬೆಕ್ಕಿನ ಕಿವಿ ಹಿಡಿಯುತ್ತೆ. ಬೆಕ್ಕು ಹೋಗಿ ಇಲಿಯ ಬಾಲ ಕಚ್ಚುತ್ತದೆ. ಇಲಿಯು ಹೋಗಿ ಹುಡುಗನನ್ನು ಕಚ್ಚುತ್ತದೆ. ಆಗ ಅವನು ಮೊಟ್ಟೆಗಳನ್ನು ತೆಗೆದುಕೊಡುತ್ತಾನೆ' ಎಂದು ಹೇಳಿತು. ಆಗ ಆ ಮುದುಕ 'ಇಲ್ಲಪ್ಪ ನಂಗೆ ಆಗಲ್ಲ. ನನಗೆ ಚಳಿ ತಡ್ಕೊಳ್ಳಾಕೆ ಆಗ್ತಿಲ್ಲ' ಅಂತ ಬೆಂಕಿ ಕಾಯಿಸ್ತಾ ಕುಳಿತುಬಿಟ್ಟ.